**ಬೆಂಗಳೂರು ನಗರದಲ್ಲಿ ಲೈವ್‌ಬ್ಯಾಂಡ್ ಕ್ಯಾಬರೆ ಹಾಗೂ ಅಶ್ಲೀಲ ಭಿತ್ತಿ ಪತ್ರಗಳ ನಿಷೇದ**

81 - ಶ್ರೀ ಬಿ.ಎಸ್. ಯ್ಡಡಿಯೂರಪ್ಪ (ಶಿಕಾರಿಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೆಂಗಳೂರು ನಗರದಲ್ಲಿ ಲೈವ್‌ಬ್ಯಾಂಡ್ ಹಾಗೂ ಕ್ಯಾಬರೆ ನಿಷೇಧಿಸಿರುವುದು ನಿಜವೇ,*

*ಆ) ಬೆಂಗಳೂರು ನರಗದಲ್ಲಿ ಪುನಃ ಲೈವ್‌ಬ್ಯಾಂಡ್ ಮತ್ತು ಕ್ಯಾಬರೆಗಳನ್ನು ಪ್ರಾರಂಭಿಸಲು ಸರ್ಕಾರದವರು ಅನುಮತಿ ನೀಡಲು ಪರಿಶೀಲಿಸುತ್ತಿರುವರೇ,*

*ಇ) ಅಶ್ಲೀಲತೆಯ ವಿರುದ್ಧ ಸಮರ ಸಾರುತ್ತೇವೆಂದು ಲೈವ್‌ಬ್ಯಾಂಡ್ ನಿಷೇಧಿಸಲು ನಿರ್ಧರಿಸಿದ ಸರ್ಕಾರ ಕೆಲವು ತಿಂಗಳುಗಳಿಂದ ಬೆಂಗಳೂರಿನ ಗೋಡೆಗಳ ಮೇಲೆ ಇಂಗ್ಲೀಷ್ ಮಲಯಾಳಂ ಹಾಗೂ ಇತರ ಕೆಲವು ಭಾಷೆಯ ಚಲನಚಿತ್ರಗಳ ಅಶ್ಲೀಲ ಪೋಸ್ಟರ್‌ಗಳ ವಿರುದ್ಧ ಸಮರ ಸಾರದೇ ಇರುವುದರ ಉದ್ದೇಶವೇನು*

*ಈ) ಬೆಂಗಳೂರು ಹಾಗೂ ರಾಜ್ಯದ ಇತರ ಪಟ್ಟಣಗಳಲ್ಲಿ (ಸಣ್ಣ ಪಟ್ಟಣಗಳೂ ಸೇರಿ) ಅಶ್ಲೀಲ ಚಿತ್ರ ಪ್ರತಿಬಂಧಿಸಿ ಆದೇಶ ಹೊರಡಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು.*

*ಉ) ಕೆಲವು ವೃತ್ತ ಪತ್ರಿಕೆಗಳಲ್ಲಿ ಬರುತ್ತಿರುವ ಅಶ್ಲೀಲ ಚಿತ್ರಗಳನ್ನು ತಡೆಹಿಡಿಯಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ.*

ಶ್ರೀ ಪಿ.ಜಿ. ಆರ್. ಸಿಂಧ್ಯಾ(ಗೃಹ ಸಚಿವರು) :

ಅ) ಹೌದು

ಆ) ಈ ವಿಷಯ ಒಳಾಡಳಿತ ಮತ್ತು ಸಾರಿಗೆ ಇಲಾಖೆಯಲ್ಲಿ ಪರಿಶೀಲನೆಯಲ್ಲಿಲ್ಲ.

ಇ) ಅಶ್ಲೀಲತೆಯ ವಿರುದ್ಧ 9 ಪ್ರಕರಣಗಳ ಮೇಲೆ ಮೊಕದ್ದಮೆ ಹೂಡಿ ಅವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತವೆ.

ಕರ್ನಾಟಕ ಅಬಕಾರಿ ನಿಯಮಗಳ ಪ್ರಕಾರ ಮಧ್ಯಪಾನ ಮಾಡುವ ಇಲ್ಲವೇ ಸರಬರಾಜು ಮಾಡುವ ಸ್ಥಳದಲ್ಲಿ ಹೆಂಗಸರನ್ನು ಮತ್ತು ಮಕ್ಕಳನ್ನು ಉಪಯೋಗಿಸಿಕೊಳ್ಳುವುದು ನಿಷಿದ್ದವಿದೆ. ಆದಕ್ಕಾಗಿ ಲೈವ್‌ಬ್ಯಾಂಡ್‌ಗಳ ಮೇಲೆ ನಿಷೇಧವಿದೆ. ಅಶ್ಲೀಲತೆಗಾಗಿ ಅಲ್ಲ.

ಈ) ಪ್ರಸ್ತುತ ಈಗಿರುವ ಕಾಯ್ದೆಯಡಿಯಲ್ಲಿಯೇ ಅಶ್ಲೀಲತೆ ಚಿತ್ರಗಳ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರವಿರುತ್ತದೆ.

ಉ) ವೃತ್ ಪತ್ರಿಕೆಯಲ್ಲಿಯೂ ಸಹ ಅಶ್ಲೀಲ ಚಿತ್ರಗಳನ್ನು ಮುದ್ರಿಸಿದರೆ ಅವರ ಮೇಲೂ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**Posts of Engineers in Upper Krishna Project :**

571 - Shri B.S. Yediyurappa (Shikaripura) : Will the Hon'ble Chief Minister be Pleased to State:

*1) Number of posts Engineer - in-Chief, Chief Engineer, Superintending Engineer,. Executive Engineer. Assistant Exective Engineer Assistant Engineer & Junior Engineer in different Divisions of Upper Krishna Project.*

*2) of them, how many have been filled, how many are Vacant. (Separate Details of different cadres to be given0*